”ಜನಪದ ಸಾಹಿತ್ಯದ ಗುಣವಿಶೇಷ ಮತ್ತು ಜೀವನ”

AUTHOR:-AUTHOR:-ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ

ಸಹ ಪ್ರಾಧ್ಯಾಪಕರು ಎಸ್.ಎಮ್.ಭಂಡಾರಿ ಮತ್ತು ರಾಟಿ ಪದವಿ ಮಹಾವಿದ್ಯಾಲಯ ಗುಳೇದಗುಡ್ಡ ಬಾಗಲಕೋಟೆ ಜಿಲ್ಲೆ.

ABSTRCT:ಜಾನಪದರಿಗೆ ಲಿಪಿಯ ಅಗತ್ಯ ಕಾಣಲಿಲ್ಲ. ಎಂತಲೇ ಕನ್ನಡ ಜಾನಪದ ಸಾಹಿತ್ಯ ಅನೇಕ ಕಾಲಗಳವರೆಗೆ ಶ್ರಾವಣ-ಎಂದರೆ ಕೇಳುವುದಕ್ಕೊಸ್ಕರ ಮೀಸಲು ಎಂದು. ಬಾಯಿಂದ ಬಾಯಿಗೆ ತಲೆ ತಲಾಂತರದಿಂದಲೂ ನಡೆದುಕೊಂಡು ಬಂದಿತು. ಲಿಖಿತ ಸಾಹಿತ್ಯದಲ್ಲಿ ಕನ್ನಡ ಭಾಷೆಯಲ್ಲಿ ಕಾಲ ಕಾಲಕ್ಕೆ ಬದಲಾಗುತ್ತ ಬಂದಿರುವ ಸ್ಥಿತ್ಯಂತರಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಹಾಗೆ ಜಾನಪದ ಭಾಷೆಯಲ್ಲಿ ಪ್ರಾದೇಶಿಕ ಭೇದಗಳನ್ನು ಗುರುತಿಸಲು ಸಾಧ್ಯವಿದೆ ಹೊರತು ಅಲ್ಲಿ ಕಲಿಕೆಯ ಸ್ಥಿತ್ಯರಗಳನ್ನು ಗುರುತಿಸಲು ಬರುವಂತಿಲ್ಲ. ಏಕೆಂದರೆ ಜಾನಪದ ಸಾಹಿತ್ಯವು ಬಾಯಿಂದ ಬಾಯಿಗೆ ಬಂದಿರುವುದರಿಂದ ವರ್ತಮಾನದಲ್ಲಿ ಬಳಕೆಯಲ್ಲಿರುವ ಆಡುನುಡಿಯನ್ನೇ ಬಳಸಿ ಬಿಡುತ್ತದೆ.ಬೆಟಗೇರಿ ಕೃಷ್ಣಶರ್ಮರು ಇಲ್ಲಿ ಕೆಲವು ತ್ರಿಪದಿಗಳನ್ನು ಆಧಾರವಾಗಿ ಕೊಡುತ್ತ ನರಗುಂದ ಬಂಡಾಯದ ಬಾಬಾಸಾಹೇಬ ಮತ್ತು ಕಿತ್ತೂರ ಮಲ್ಲಜಸರ್ಜ ಇವರನ್ನು ನೆನೆಸುವುದಲ್ಲದೆ ಸಮುದಾಯ ಸಂಕೇತವಾಗಿ, ಸಂಸಾರ, ದಾಂಪತ್ಯ, ಸಂಬಂಧ ವ್ಯವಹಾರ ಏನೆಲ್ಲ ಒಟ್ಟಿಗೆ ಬಂದು ಜಾನಪದ ಸಾಹಿತ್ಯದಲ್ಲಿ ನಮ್ಮವರ ಜೀವನದ ಬಳುವಳಿ ಹೇಗೆ ಬಂದಿದೆ ಎಂಬುದನ್ನು ವಿವರಿಸುವರು.

KEY WORDS:-

ಬೆ.ಕೃ:-ಬೆಟಗೇರಿ ಕೃಷ್ಣಶರ್ಮರು

ಕ.ಜಾ.ಸಾ:-'ಕನ್ನಡ ಜಾನಪದ ಸಾಹಿತ್ಯ'

ಬಾ.ಸು:-ಬಾಳಿಸುಳಿ

ಪ.ಭ:-ಪತಿ ಭಕ್ತಿ

ಒ.ವಾ:-ಒಡವೆ-ವಾಲಿ

INTRODUCTION:-ಬೆಟಗೇರಿ ಕೃಷ್ಣಶರ್ಮರು ಜನಪದರಲ್ಲಿರುವ ಮೌಲ್ಯಕ ವಿಚಾರಗಳನ್ನು ಅವರ ಸಾಹಿತ್ಯದ ಮೂಲಕ ಗುರುತಿಸುವ ಕೆಲಸ ಮಾಡಿದ್ದಾರೆ-'ಕನ್ನಡ ಜಾನಪದ ಸಾಹಿತ್ಯ' ಕೃತಿಯಲ್ಲಿ ಜಾನಪದ ಸಂಸ್ಕೃತಿ ಬೆಳೆದ ಬಂದು ಬಗೆ. ಮನಸು ಬುದ್ದಿ ಹೃದಯಗಳಿಂದ ಕೂಡಿದ ಪ್ರತಿಯೊಬ್ಬ ಮಾನವನೂ ಸುಖಸಮೃದ್ದಿಯ ಜೀವನವನ್ನು ಬಯಸುವನು. ತನ್ನ ವಿವೇಚನೆಯನ್ನು ವಿನಿಯಮ ಮಾಡಿಕೊಳ್ಳಲು ಧ್ವನಿ ಸಂಕೇತ ಬಳಸಿದ್ದನ್ನು ತಿಳಿಸುತ್ತಾ. ಶಬ್ದ ಸಂಕೇತ ಬೆಳೆದಂತೆ. ವಸ್ತು ಸೂಚಕ ಪದಗಳಾದವು; ಇನ್ನೂ ಕೆಲವು ಭಾವ ಸೂಚಕ ಪದಗಳೆನಿಸಿದವು.

ಜನಪದ ಸಾಹಿತ್ಯದ ಗುಣವಿಶೇಷ:ಬೆಟಗೇರಿ ಕೃಷ್ಣಶರ್ಮರು ಜನಪದರಲ್ಲಿರುವ ಮೌಲ್ಯಕ ವಿಚಾರಗಳನ್ನು ಅವರ ಸಾಹಿತ್ಯದ ಮೂಲಕ ಗುರುತಿಸುವ ಕೆಲಸ ಮಾಡಿದ್ದಾರೆ-'ಕನ್ನಡ ಜಾನಪದ ಸಾಹಿತ್ಯ' ಕೃತಿಯಲ್ಲಿ ಜಾನಪದ ಸಂಸ್ಕೃತಿ ಬೆಳೆದ ಬಂದು ಬಗೆ. ಮನಸು ಬುದ್ದಿ ಹೃದಯಗಳಿಂದ ಕೂಡಿದ ಪ್ರತಿಯೊಬ್ಬ ಮಾನವನೂ ಸುಖಸಮೃದ್ದಿಯ ಜೀವನವನ್ನು ಬಯಸುವನು. ತನ್ನ ವಿವೇಚನೆಯನ್ನು ವಿನಿಯಮ ಮಾಡಿಕೊಳ್ಳಲು ಧ್ವನಿ ಸಂಕೇತ ಬಳಸಿದ್ದನ್ನು ತಿಳಿಸುತ್ತಾ. ಶಬ್ದ ಸಂಕೇತ ಬೆಳೆದಂತೆ. ವಸ್ತು ಸೂಚಕ ಪದಗಳಾದವು; ಇನ್ನೂ ಕೆಲವು ಭಾವ ಸೂಚಕ ಪದಗಳೆನಿಸಿದವು; ಕ್ರಿಯಾ ಸೂಚಕ ಪದಗಳಾಗಿನಿಂತವು. ಈ ಶಬ್ದಗಳನ್ನು ಕುರಿತು ಹೇಳುತ್ತ ಇವು ಉಚಿತಾರ್ಥ ಬೋಧೆಯಾಗುವಂತೆ, ಪೂರ್ಣವಾಕ್ಯವಾಗಲು ಅನೇಕ ಕಾಲ ಗತಿಸಿರಬೇಕು. ಪ್ರಾಥಮಿಕ ವ್ಯಾವಹರವನ್ನು ಆರಂಭಿಸಲು ಮಾನವರು ಜೀವನ ವ್ಯವಹಾರವನ್ನು ಅಂತುಕೊಂಡರು. ಆಗ ಅವರಿಗೆ ಲೀಪಿಯ ಅಗತ್ಯವಿರಲಿಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಧ್ವನಿ ಸಂಕೇತಗಳು ಹುಟ್ಟಿಕೊಂಡಿದ್ದರಿಂದ ಬೇರೆ ಬೇರೆ ಜನಜಂಗುಳಿಯ ಭಾಷೆ, ಬೇರೆ ಬೇರೆ ಬಗೆಯದಾಯಿತು. ಹೀಗೆ ಕನ್ನಡ ಜಾನಪದ ಭಾಷೆ ಹುಟ್ಟಿಕೊಂಡಿತು. ಜಾನಪದರಿಗೆ ಲಿಪಿಯ ಅಗತ್ಯ ಕಾಣಲಿಲ್ಲ. ಎಂತಲೇ ಕನ್ನಡ ಜಾನಪದ ಸಾಹಿತ್ಯ ಅನೇಕ ಕಾಲಗಳವರೆಗೆ ಶ್ರಾವಣ-ಎಂದರೆ ಕೇಳುವುದಕ್ಕೊಸ್ಕರ ಮೀಸಲು ಎಂದು. ಬಾಯಿಂದ ಬಾಯಿಗೆ ತಲೆ ತಲಾಂತರದಿಂದಲೂ ನಡೆದುಕೊಂಡು ಬಂದಿತು. ಇದು ಅಂತೆಯೇ ಮೂಲ ರೂಪದಲ್ಲಿ ಉಳಿದಿಲ್ಲವೆಂದು ತಿಳಿದ ವಿಷಯವೇ ಎಂದಿದ್ದಾರೆ.

ಲಿಖಿತ ಸಾಹಿತ್ಯದಲ್ಲಿ ಕನ್ನಡ ಭಾಷೆಯಲ್ಲಿ ಕಾಲ ಕಾಲಕ್ಕೆ ಬದಲಾಗುತ್ತ ಬಂದಿರುವ ಸ್ಥಿತ್ಯಂತರಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಹಾಗೆ ಜಾನಪದ ಭಾಷೆಯಲ್ಲಿ ಪ್ರಾದೇಶಿಕ ಭೇದಗಳನ್ನು ಗುರುತಿಸಲು ಸಾಧ್ಯವಿದೆ ಹೊರತು ಅಲ್ಲಿ ಕಲಿಕೆಯ ಸ್ಥಿತ್ಯರಗಳನ್ನು ಗುರುತಿಸಲು ಬರುವಂತಿಲ್ಲ. ಏಕೆಂದರೆ ಜಾನಪದ ಸಾಹಿತ್ಯವು ಬಾಯಿಂದ ಬಾಯಿಗೆ ಬಂದಿರುವುದರಿಂದ ವರ್ತಮಾನದಲ್ಲಿ ಬಳಕೆಯಲ್ಲಿರುವ ಆಡುನುಡಿಯನ್ನೇ ಬಳಸಿ ಬಿಡುತ್ತದೆ. ಅದರೊಂದಿಗೆ ವಿಲೀನಗೊಳ್ಳುತ್ತದೆ. ಜಾನಪದದ ಮೂಲ ಹೇಗಿತ್ತು ಎನ್ನುವುದನ್ನು ಎಂತಹ ಭಾಷಾ ವಿಜ್ಞಾನಿಗಳೂ ಕಂಡುಹಿಡಿಯಲಾರರು. ಜನಪದರು ಆಡುವ ನುಡಿಯು ಬದಲಾದಂತೆ ಅವರ ಸಾಹಿತ್ಯದ ಭಾಷೆ ಮಾರ್ಪಡುತ್ತ ಬಂದಿದೆ ಎನ್ನುವುದನ್ನು ಅರ್ಥೈಸುವರು.

ಕನ್ನಡ ಅಭಿಜಾತ ಪಂಡಿತರನ್ನು ಕುರಿತು ಹೇಳುತ್ತಾ 'ಈ ಪಂಡಿತರು ಕನ್ನಡ ಜಾನಪದ ಭಾಷೆ ವ್ಯಕಾರಣ ನಿಯಮಗಳಿಗೆ ವಿರೋಧಿಯಾಗಿರಬಹುದೇ ಹೊರತು. ವ್ಯಾಕರಣದ ಮೂಲತತ್ವಕ್ಕೆ ವಿರೋಧಿಯಾದುದಲ್ಲ. ಸ್ಪಷ್ಟವಾಗಿ ಅರ್ಥಬೋಧೆಯನ್ನು ಮಾಡಿಕೊಡಬಲ್ಲ ಎಂತಹ ಗಾವಿಲರ ಭಾಷೆಯೂ ವ್ಯಾಕರಣದ ಮೂಲತತ್ವದ ತಳಹದಿಯ ಮೇಲೆಯೇ ಅದು ಬೆಳೆದು ಬಾಳುತ್ತ ಬಂದಿದೆಯೆಂದು ಹವಳುಬಹುದು'

ಕನ್ನಡ ಭಾಷೆ ಜನಪದ ಭಾಷೆಯಾಗಿ ಒಂದು ಕ್ರಮನಿಯಮಗಳಲ್ಲಿ ಬೆಳೆಯುತ್ತ ಬಂದುದರಿಂದ, ಬರೆಯ ಬೇಕೆಂದರೆ, ಆ ಭಾಷೆಗೂ ಒಂದು ವ್ಯಾಕರಣ ಶಾಸ್ತ್ರವನ್ನು ಬರೆಯಬಹುದೆಂದು ತಮ್ಮ ನಿಲುವು ತಿಳಿಸುವರು. ಷಟ್ಪದಿ-ಗಾಂಗತ್ಯಗಳಲ್ಲಿ ಮಹಾಕಾವ್ಯಗಳನ್ನು ರಚಿಸಿದ ಕವಿವರ್ಯರೊ ನಮಗೆ ಶಾಸ್ತ್ರೀಯ ವ್ಯಾಕರಣಾ ನಿಯಮಗಳ ಗೊಡವೆ ಬೇಕಿಲ್ಲವೆಂದ ಹೇಳಿದ್ದನ್ನು ಗಮನಿಸಿದರೆ, ಅರ್ಥಶೋಧೆಗೆ ಧಕ್ಕೆತಾರದ ಜಾನಪದ ಭಾಷೆಯ ಸ್ವತಂತ್ರ ಪದ್ಧತಿಯನ್ನೇ ಅಂದಿನ ಕವಿಗಳು ಪುರಸ್ಕರಿಸಿರುವರೆಂದು ತಿಳಿಸಿದ್ದಾರೆ.

ನಮ್ಮ ಜನಪದಲಯಗಳ ಕುರಿತು ಜಾನಪದ ಕುಲದಲ್ಲಿ ಲಯಗಾರಿಕೆ, ಕುಣಿತ-ಹಾಡುಗಳು, ಎಂದಿನಿಂದಲೋ ನಡೆದುಕೊಂಡು ಬಂದಿವೆ. ಎಂತಲೇ ಅವರ ಪದ್ಯಸಾಹಿತ್ಯವೂ ಆದೊಂದು ವಿಶಿಷ್ಟ ಲಯಗಾರಿಕೆಯಿಂದ ನಿರ್ಮಿತಗೊಂಡಿದೆ. ಅವರಿಗೆ ಅಕ್ಷರ ಗಣಗಳ ಇಟ್ಟಿಗೆಗಳೂ ಬೇಕಾಗಿರಲಿಲ್ಲ: ಮಾತ್ರಾಗಣಗಳ ಇಟ್ಟಿಗೆಗಳೂ ಬೇಕಾಗಿರಲಿಲ್ಲ. ಗೇಯಕ್ಕೆ ಅನುಗುಣವಾದ ಅನಿಯಮಿತ ಮಾತ್ರೆ, ಅನಿಯಮಿತ ಅಕ್ಷರಗಳಿಂದಲೇ ಕೂಡಿದ ಶಬ್ದದ ಇಟ್ಟಿಗೆಗಳಿಂದಲೇ ತಮ್ಮ ಪದ್ಯ ಸಾಹಿತ್ಯದ ಕಟ್ಟಿದ್ದಾರೆ. ಇವರ ಗೇಯಗಣ ಪದ್ಧತಿಯ ಗುಣದ ಅರಿಕೆಯಾದ ಮೇಲೆ, ಈ ಜಾನಪದ ಗಣಪದ್ಧತಿಯನ್ನು 'ಅಂಶಗಣ' ಎಂದು ಶಾಸ್ತ್ರೀಯವಾದ ಹೆಸರಿಟ್ಟರು. ಇವರು ಬಳಸಿದ ಮೂರು ಬಗೆಯ ಶಬ್ದಗಣಗಳನ್ನು ವಿಶ್ಲೇಷಿಸಿ ನೋಡಿ ಅವುಗಳಿಗೆ `ಬ್ರಹ್ಮಗಣ', 'ವಿಷ್ಣುಗಣ', ರುದ್ರಗಣ' ಎಂದು ನಾಮಕರಣ ಮಾಡಿದರು ಎಂದಿರುವರು

ಬೇಟಗೇರಿಯವರು ಪ್ರಾಸನಿಯಮದ ಬಗ್ಗೆ ನಮ್ಮ ಜಾನಪದರು ಪ್ರಾಸ ನಇಯಮದ ಕಟ್ಟಿಗೆ ಬೀಳಲಾರರು ಎಂದಿರುವರು. ಹಾಗಂತ ಪ್ರಾಸ ಪದ್ಧತಿ ಕಡೆಗಣಿಸಿದವರಲ್ಲ. ಕಿವಿ-ಮನಗಳನ್ನು ಆಕರ್ಷಿಸಬಲ್ಲ ವಿಶಿಷ್ಟವಾದ ಪ್ರಾಸಾಕ್ಷರಗಳನ್ನು ಇವರು ಹೇರಳವಾಘಿ ಬಳಕೊಂಡಿದ್ದಾರೆಂಬುದನ್ನ ಗುರುತಿಸಿರುವರು. ಅನುಪ್ರಾಸ ಪದ್ಧತಿ ಇವರಲ್ಲಿ ಇದೆಯಾದರೂ ಅದು ಎಳೆದು ತಂದ ದುರ್ಬೋಧ ಶಬ್ದಗಳಿಂದ ಸಚನೆಗೊಂಡಿಲ್ಲ; ಇವರು ಬಳಸುವ ಅರ್ಥಾಲಂಕಾರಗಳು ವಾಸ್ತವವಾಗಿವೆ ಹೊರತು, ಕವಿ ಸಮಯದ ಕೃತ್ರಿಮತೆಯ ಸಂತಾನಗಳಲ್ಲವೆನ್ನುತ್ತಾರೆ. ಮಾನವ ಪರಂಪರೆಯನ್ನು ತಿಳಿದು ಮಾನವೀಯ ಜೀವನಾನುಭವ, ಲೋಕ ಪರಿಚಯ ಮೊದಲಾದ ನೈಜ ಸಂಗತಿಗಳಿಗೆ ಇವರ ಸಾಹಿತ್ಯದಲ್ಲಿ ಪ್ರಧಾನ ಸ್ಥಾನವಿರುವುದನ್ನು ಖಚಿತ ಪಡಿಸುವರು. ಜನಪದ ದೇವ-ದೇವತೆಗಳನ್ನು ಕುರಿತು ಇವರು ಶ್ರದ್ಧೆಯಿರಿಸಿದ ದೇವ-ದೇವತೆಗಳನ್ನು ಕೂಡಾ ವಾಸ್ತವ ಜೀವನದಿಂದ ಸಿಡಿದು ನಿಂತವರಲ್ಲ. ಇವರು ಮಾನವರಂತೆ ಆಡುವುದು, ಆಳುವುದು. ನಗುವುದು. ತಿನ್ನುವುದು ಇಂತಹ ಲೌಕಿಕ ವ್ಯವಹಾರವನ್ನು ಮಾಡುವುದುಂಟು.

ಜನಪದರಲ್ಲಿನ ಕಾವ್ಯಾದಲ್ಲಿ ಬಳಕೆಗೊಳ್ಳುವ ರಸಗಳನ್ನು ಪಟ್ಟಿಮಾಡುತ್ತಾ, ಶೃಂಗಾರ, ವೀರ. ಕರುಣೆ, ಹಾಸ್ಯ ರಸಗಳ ಸ್ಥಾಯಿ ಭಾವಗಳಲ್ಲಿ ಜನಪದರ ಪ್ರೀತಿ ಹೆಚ್ಚು ಆದರೆ ಇವುಗಳನ್ನು ರಸ ಕಲ್ಪನೆಯಿಟ್ಟ ಬಳಸುವುದಿಲ್ಲ. ತಮ್ಮ ಬದುಕಿನ ವಾಸ್ತವದೊಂದಿಗೆ ತಮ್ಮಿಂದ ತಾವೇ ಅವು ಪೋಷಣೆ ಪಡೆದು ಬೆಳೆಯುತ್ತವೆ ಎನ್ನುತ್ತಾ, ಇವೆಲ್ಲವೂ ಜಾನಪದ ಸಾಹಿತ್ಯದಲ್ಲಿ ಸವಿಗಾರರಾದವರಿಗೆ ಎದ್ದು ಕಾಣುವಂತ ಗುಣವಿಶೇಷಗಳೆಂದು ಅರ್ಥೈಸುವರು.

ಜಾನಪದ ಸಾಹಿತ್ಯದಲ್ಲಿ ನಮ್ಮ ಜೀವನೇತಿಹಾಸ

ಬೆಟಗೇರಿ ಕೃಷ್ಣಶರ್ಮರು ಇಲ್ಲಿ ಕೆಲವು ತ್ರಿಪದಿಗಳನ್ನು ಆಧಾರವಾಗಿ ಕೊಡುತ್ತ ನರಗುಂದ ಬಂಡಾಯದ ಬಾಬಾಸಾಹೇಬ ಮತ್ತು ಕಿತ್ತೂರ ಮಲ್ಲಜಸರ್ಜ ಇವರನ್ನು ನೆನೆಸುವುದಲ್ಲದೆ ಸಮುದಾಯ ಸಂಕೇತವಾಗಿ, ಸಂಸಾರ, ದಾಂಪತ್ಯ, ಸಂಬಂಧ ವ್ಯವಹಾರ ಏನೆಲ್ಲ ಒಟ್ಟಿಗೆ ಬಂದು ಜಾನಪದ ಸಾಹಿತ್ಯದಲ್ಲಿ ನಮ್ಮವರ ಜೀವನದ ಬಳುವಳಿ ಹೇಗೆ ಬಂದಿದೆ ಎಂಬುದನ್ನು ವಿವರಿಸುವರು.

ನಮ್ಮವರಿಗೆ ಇತಿಹಾಸ ಪ್ರಜ್ಞೆಯ ಕೊರತೆ ಕಾಡುತ್ತಿದೆ. ನಾಗರಿಕ ಜೀವನದ ಇತಿಹಾಸ-ಸಂಸ್ಕೃತಿಗಳು ವಿವರಗಳೂ ನಮಗೆ ವಾಸ್ತವವಾಗಿ ದೊರೆಯುವುದಿಲ್ಲವೆಂದ ಮೇಲೆ, ಜಾನಪದ ಸಾಂಸ್ಕೃತಿ, ಸಾಮಾಜಿಕ ಜೀವನದ ಇತಿಹಾಸವು ನಮಗೆ ಎಲ್ಲ ದೊರೆಯಬೇಕು? ಹೇಗೆ ದೊರೆಯಬೇಕು? ಎನ್ನುವ ಪ್ರಶ್ನೆಯನ್ನು ಮುಂದಿಡುತ್ತಾರೆ. ನಾಗರಿಕ ಲೋಕದ ಇತಿಹಾಸ ಸಂಸ್ಕೃತಿಗಳನ್ನು ಅವರ ಲಿಖಿತ ವಾಙ್ಮಯದ ಮೂಲಕ ವಾಸ್ತವ ದೃಷ್ಟಿಯ ಸಂಶೋಧಕರು, ಅಲ್ಪ-ಸ್ವಲ್ಪ ಸತ್ಯ ಇತಿಹಾಸದ ಸಂಗತಿಗಳನ್ನು ಕಂಡುಹಿಡಿಯಬಹುದು ಎಂದಿದ್ದಾರೆ. ಅದಕ್ಕೆ ಅನೇಕ ಸಲಕರಣೆಗಳಿದ್ದರೂ ಅವು ರಾಜ-ಮಹಾರಾಜರಿಗೆ, ಧರ್ಮ ಪೀಠಾಧಿಕಾರಿಗಳಿಗೆ, ಮಾಂಡಲಿಕ-ಮನ್ನೆಯರಿಗೆ ಸಂಬಂಧಿಸಿದ ಸತ್ಯೇತಿಹಾಸದ ಸಂಶೋಧನ ಕಾರ್ಯಕ್ಕೆ ಸಹಕಾರಿಯಾಗಬಹುದು. ಆದರೆ ಸಾಮಾನ್ಯ ಜನ ಜೀವನದ ಇತಿಹಾಸ-ಅಂದರೆ ಜಾನಪದ ನಡೆವಳಿ ನುಡಿವಳಿಗಳ ನೈಜ ಚಿತ್ರಣವು ಅವುಗಳಿಗೆ ದೊರೆಯುವುದಿಲ್ಲ. ಹೀಗಾಗಿ ನಾವು ಜಾನಪದ ಸಾಹಿತ್ಯ ಶರಣು ಹೋಗಬೇಕೆನ್ನುತ್ತಾರೆ. ತಮ್ಮ ಬದುಕಿನಲ್ಲಿ ಜನಪದರು ಅಳವಡಿಸಿಕೊಂಡ ರೀತಿ-ನೀತಿ ಪಾರತ್ರಿಂದ ಬಗ್ಗೆ ಇದ್ದ ಅವರ ಕಲ್ಪನೆ-ಭಾವನೆಗಳು, ವೈಯಕ್ತಿಕ ಆಶ-ಅಭಿರುಚಿಗಳು, ಸಾಮಾಜಿಕ ಕಟ್ಟು-ಕಟ್ಟಳೆಗಳು, ಜೀವನ ಸೌಂದರ್ಯದ ಸಾಧನೆಗಳು, ಪ್ರಾದೇಶಿಕ ನೈಸರ್ಗಿಕ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಂಡ ಮಾರ್ಪಾಡು, ಕೆಲವೊಂದು
ಮಹತ್ವದ ವ್ಯಕ್ತಿಗಳ ಗುಣವರ್ಣನೆಗಳು - ಇವೆಲ್ಲವೂ ನಮ್ಮ ಜಾನಪದ ಸಾಹಿತ್ಯದಲ್ಲಿ, ಸಂಶೋದ ದೃಷ್ಟಿಗೆ ಕಂಡಿತವಾಗಿಯು ದೊರೆಯುತ್ತವೆ ಎನ್ನುವುದನ್ನು ಹೇಳಿದ್ದಾರೆ. ಜನಪದರು ಬಳಸುವ ಒಗಟನಾರ್ಥ ಮಾತು ಉದಾಹರಿಸುತ್ತ 'ರಾಯ ಸತ್ತ ಹಾವಳಿ' ಇದು ವಿಜಯನಗರದ ರಾಮರಾಜನು ಯುದ್ಧದಲ್ಲಿ ಸತ್ತ ನಂತರದ ವಿಪ್ಲವ ಕಾಲದ ಪ್ರಜ್ಞೆಯ ಒಡೆನುಡಿ ಅಥವಾ ಪಡೆನುಡಿ ಎನ್ನಬಹುದು. 'ಬಾಜಿರಾಯ ನಮಗೆ ಆಗ್ಯಾನ' ಎನ್ನವುದು ವಿಡಂಬನಾತ್ಮಕ ನುಡಿ. ಇದು ಎರಡನೇ ಬಾಜಿರಾಯನ ವಿಲಾಸ ಜೀವನ ನೆನಪು ಸೂಚಿಸುವುದು ಎನ್ನುತ್ತಾರೆ.

ನರಗುಂದದ ಐತಿಹಾಸಿಕ ಘಟನೆ ಜನಪದರ ಭಾವದಲ್ಲಿ ಉಳಿದ ನುಡಿ ತ್ರಿಪದಿಯಾದದ್ದು.

“ಮಾಳಿಗೆ ಮ್ಯಾಗಿನ ಹುಲ್ಲ ಗಾಳಿಗೆ ಹಾರಿದ್ದಾಂಗ ಯಾಳೆ ಬಂದಾಗ ಯಾರಿಲ್ಲ-ಖಾಖಾಸಾಯ ಗಾಳಿಗೆ ಬಾಯಿ ಬಿಡ ತಾನೋ!"

ಬಂಡಾಯಕ್ಕೆ ಎದೆಯೊಡ್ಡಿದ ಖಾಖಾಸಾಹೇಬನ ಸ್ಥಿತಿಯನ್ನು ತೆರೆದು ತೋರುವ ಮತ್ತು ವೈಭವದ ಬದುಕ ತೃಣಕ್ಕೆ ಸಮಾನವಾಯಿತು ಎನ್ನುವ ಇತಿಹಾಸದ ಚಿತ್ರವಿದೆ. ಮಾನವ ವೈಯಕ್ತಿಕವಾಗಿಯೇ ಸಮಯ ಎದುರಿಸಬೇಕು.

ಕಿತ್ತೂರ ಮಲಸರ್ಜ ಎತ್ತ (ಎಂತಹ) ಪುಣ್ಣೆವಂತ ದತ್ತಗೇಡ್ಕೊಬ್ಬ ಮಗಹುಟ್ಟಿ-ಕಳಕೊಂಡ ಕಿತ್ತೂರ ನಾಡ ಸಿರಿಮಾನ್ಯ!”

ಕಿತ್ತೂರ ಸಂಸ್ಥಾನ ಪತನದ ಬಳಿಕ ಅಲ್ಲಿಯ ಜನಸಾಮಾನ್ಯರು ಬಿಟ್ಟ ಬಿಸಿವುಸಿರನ್ನು, ಇದರಂತೆ ಒಬ್ಬನ ಅಯೋಗ್ಯತೆಯ ಬಗೆಗೆ ಹೇಳುವಾಗ 'ತಗರೇ ಒಂದು ಕವಡೀ ಕಿಮ್ಮತ್ತ ಇಲ್ಲಿ', ಬಡಾಯಿ ಕೊಚ್ಚತಾನೆ! ಈ ನುಡಿಯನ್ನು ಪ್ರಾದೇಶಕವಾಗಿ ಬಳಸುವರು. ಇದನ್ನು ಜನಪದರ ವ್ಯವಹಾರದಲ್ಲಿ ಕವಡೆಗಳನ್ನು ಬಳಸುವ ಕಾಲ ಇತ್ತು ಅದರ ಸೂಚನೆಯ ದ್ಯೋತಕ ನುಡಿಯಂದು ಆನಂದಕಂದರು ಹೇಳುತ್ತಾರೆ.

ಕಾಯಕುಲ ಅಥವಾ ಸಮುದಾಯಗಳ ಶ್ರಮದ ಜೀವನ ವೈಷಮ್ಯ ಚಿತ್ರಣಗಳು ಜನಪದದಲ್ಲಿ ದೊರೆವುದನ್ನು ಸಂಗ್ರಹಿಸಿದ್ದು ಹೀಗೆ-

"ಕುಂಬಾರ ನೀನಗ್ಯಾಕೊ ರಂಬಿಮಾಟದ ಹೆಣ್ಣು ತುಂಬಂದಿ ಕೆಸರ ತುಳಿಯಂದಿ-ಸುಟಗಡಿಗಿ ಹೊತ್ತು ಸಂತ್ಯಾಗ ಮಾರಂದಿ!"

ಕುಂಬಾರ ಸಮುದಾಯ ಸಮಾಜದ ಏಳೆಗಾಗಿ ತ ಬದುಕಿ ಇನ್ನೊಬ್ಬರಿಗೆ ಸಹಕಾರ ನೀಡಿದ್ದು, ಅಂದು ಇವರ ತ್ರಿಮದ ಮೌಲ್ಯವನ್ನು ನವೆಲ್ಲ ತೇದು ಅರಿಯದ ಊಳಿಗಮಾನ್ಯ ವ್ಯವಸ್ಥೆ ಕನಿಷ್ಠವಾಗಿ ಕಂಡಿದೆ. ಸಂಪತ್ತು, ಸೌಂದರ್ಯ, ಸುಖವೆಂಬ ಅಮೂಲ್ಯತೆಯನ್ನು ದುಡಿಸಿಕೊಳ್ಳುವ ವರ್ಗ ತುಚೀಕರಿಸಿದೆ. ಭೋಗದ ಜೀವನವನ್ನು ಬಂಡವಾಳ ಮಾಡಿಕೊಂಡ ಜನವರ್ಗ ಈ ಶ್ರಮಕನಿಗೆ ತುಳಿಯುವ ಕೆಲಸಮಾಡಿದೆ. 'ರಂಬಿಮಾಟದ ಹೆಣ್ಣು' ನಿನಗ್ಯಾಕ? ಎನ್ನುವುದು, ಕೆಸರು ತುಂಬುವುದು-ತುಳಿಯುವುದು ಪರಂಪರಾಗತ ಶ್ರಮವನ್ನು ಸೂಚಿಸಿ, ಸುಗಡಿಗಡಿಗಿ ಮಾರಿ ಬದುಕುವ, ಇದು ಸಂತೆಯ ಪರಿಕಲ್ಪನೆಯಲ್ಲಿ ಅಂತ್ಯಗೊಂಡಿದೆ. ಇದನ್ನೇ ಬೆಟಗೇರಿ ಕೃಷ್ಣ ಶರ್ಮರು ಜನ ಸಮುದಾಯದ ಇತಿಹಾಸವೆಂದಿಹರು.

ಗ್ರಾಮ ವ್ಯಾವಸ್ಥೆಯ ಚಿತ್ರಣಕ್ಕೆಂದು ರಚಿತಗೊಂಡ ತ್ರಿಪದಿಯೂ ಜಾನಪದದಲ್ಲಿದೆ. ಅದು ಊರ ಗೌಡ, ಓಲೇಕಾರ ಇವರ ಗೋಳಿನ ರೂಪಕಂಡದ್ದು

"ವಾಲಿಕಾರ ನಿನಗೆ ಒಳ್ಳೆ ಹೆಂಡತಿಯಾಕೊ? ನೀ ಹ್ವಾದಿ ರಾಜೆ ತಿರುಗೂತ-ಮನಿಮಡದಿ ಬಾಡುವಳೋ ಬಾಳಿಸುಳಿಹಾಂಗ"

ವಾಲಿಕಾರನು ಶ್ರದ್ಧೆಯಿಂದ ಕಾವಲು ಮಾಡುವುದೇ ಆತನ ಕಾಯಕ. ಊಳಿಗಮಾನ್ಯ ವ್ಯವಸ್ಥೆಯಲ್ಲಿನ ನುಡಿಯಿದಾಗಿದೆ. ಜಾನಪದಗತ್ತು ಪರಸ್ಪರ ಸಹಕಾರದಿಂದ ಕೂಡಿತ್ತು. ಊರಗೌಡನು ಆತನ ಗೋಳನ್ನು ಹೇಳಿರುವ ತ್ರಿಪದಿಯಾಗಿದೆ.

ದಾಂಪತ್ಯದ ದಾರಿ ದುರ್ಗಮವಾದಾಗ ಹೆಣ್ಣಿನ ತಾಯಿ ವ್ಯಥೆಪಡುವ, ಮಗಳ ದುಃಖಕ್ಕೆ ಒಳಗೊಳಗೆ ಕುದಿವ ನುಡಿ 'ಮಗಳನ್ನು ಬೆಂಕ್ಯಾಗ ಒಗದ್ದಾಂಗ-ಗುಡ್ಡದ ಕಲ್ಲಿಗೆ ಧಾರಿಯರಿದ್ದಾಂಗ' ಎಂದು ಧಾರೆ ಎರಿವ ಜನಪದ ಸಂಪ್ರದಾಯವನ್ನು ತಿಳಿಸುವುದು. ಜನಪದರಲ್ಲಿ ಜೀವನದ ಆಪ್ತ ಸಂಗತಿಗಳು ಹೇಗೆ ಕಾಡಿವೆ ಎಂಬುದನ್ನು - ಹೆಣ್ಣಿಗೆ ಕಿರಿಕಿರಿ ಮಾಡುವ ಗಂಡನಿಗೆ ಪ್ರತ್ಯುತ್ತರವಾಗಿ ಅವಳೂ ತಾಳಿ ಹರಕೊ ನಾನು 'ರೈತನ ಮಗಳಾಗಿ ಇರುತೇನೋ. ದುಡಿದುಣ್ಣುವ ಜೀವಕ್ಕೆ ಎಲ್ಲಿಯಾದರು ಗೌರವವಿದೆ. ದುಡಿಮೆಯಲ್ಲಿ ರೈತನ ದುಡಿಮೆಯೇ ಶ್ರೇಷ್ಠವೆನ್ನುವುದು.

ಜನಪದರ ಪತಿ ಭಕ್ತಿ – ಔದಾಯಕತನ ಇದು ಕೂಡ ಜೀವನದ ಬಹುಮುಖ್ಯ ಭಾಗ, ಚಾಪಲ್ಯತನ ಮುಖಭಂಗವುಂಟು ಮಾಡುವುದು ಎನ್ನುವುದನ್ನು ಅನೈತಿಕ ಜೀವನ ನಗೆಪಾಡಾಗುವುದು ಎಂಬ ಎಚ್ಚರಿಕೆಯನ್ನು

“ಸಾಲಸಮುದ ಮಾಡಿ ಸೂಳಿಗೆ ಸೀರಿಯ ತಂದ ಸಾವುಕಾರಣ್ಣ ಎಳೆವಾಗ-ಆ ಸೂಳಿ

ಮಾಳಿಗೇ ಏರಿ ನಗತಾಳ!"

ಅನೈತಿಕತೆ ಮನೆತನವನ್ನು ಅಳವಿಗೆ ಹಚ್ಚುವುದು. ಅದೇ ಸಾಲಿಗನು ಬಂದು ಎಳಿವಾಗ ಪತಿಯ ಗೌರವ ಕಾಯುವುದು ಸತಿಯ ಧರ್ಮವೆಂದು ತನ್ನ ಮೈಮೇಲಿನ ಒಡವೆ-ವಾಲಿ ಬಿಚ್ಚಗೆದು ನಿಲ್ಲುವ ದಾಷ್ಟ್ರ್ಯತನವನ್ನೂ ಸೇರಿಸಿದ್ದಾರೆ.

REFERENCE:-

೧.ಬೆಳುವಲ- ಅಭಿನಂದನ ಗ್ರಂಥ- ಡಾಕ್ಟರ್ ಬೆಟಿಗೇರಿ ಕೃಷ್ಣಶರ್ಮ- ಪ್ರಕಟಣೆ ಕನ್ನಡ ಸಾಹಿತ್ಯ ಪರಿಷತ್ತು
೨.ಕವಿಭೂಷಣ:-ಡಾಕ್ಟರ್ ಬೆಟಿಗೇರಿ ಕೃಷ್ಣಶರ್ಮ- ಪ್ರಕಟಣೆ ಕನ್ನಡ ಸಾಹಿತ್ಯ ಪರಿಷತ್ತು
ವಿಮರ್ಶೆ-ಸಂಶೋಧನೆ
೩. ಕರ್ನಾಟಕ ಜನಜೀವನ
೪. ಸಾಹಿತ್ಯವು ಸಾಗಿರುವ ದಾರಿ
೫.ನಮ್ಮ ಸಂಸ್ಕೃತಿ ಪರಂಪರೆ
೬.ಸಾಹಿತ್ಯವಿಹಾರ.
೭..ಜನಪದ ಸಾಹಿತ್ಯ
೮.ಬೀಸುಕಲ್ಲಿನ ಹಾಡುಗಳು
೯.ಕನ್ನಡ ಜನಪದ ಸಾಹಿತ್ಯ
೧೦.ಮಾಹಾತ್ಮ ಜ್ಞಾನ